INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -05,September-October, 2026
Page No,07-18
Peer -Reviewed, Refereed Journal

# ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣ ಮೇಲಿನ ಚರ್ಚೆಗಳ ಕುರಿತ ಪರಿಶೀಲನೆ

**ಡಾ.ಸುರೇಶ.ಬಿ.ಸಿ.**[1]

**ಸಾರಾಂಶ:** ಸಂವಿಧಾನ ರಚನಾ ಸಭೆಯಲ್ಲಿ ಶಿಕ್ಷಣ ಕುರಿತ ಚರ್ಚೆಗಳು ಸ್ವತಂತ್ರ ಭಾರತದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಭವಿಷ್ಯವನ್ನು ನಿರ್ಧರಿಸುವ ಮಹತ್ವದ ಚರ್ಚೆಗಳಾಗಿದ್ದವು. ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರೂ ಇಬ್ಬರೂ ಶಿಕ್ಷಣವನ್ನು ರಾಷ್ಟ್ರ ನಿರ್ಮಾಣದ ಮೂಲಾಧಾರವೆಂದು ಪರಿಗಣಿಸಿದರೂ, ಅವರ ದೃಷ್ಟಿಕೋನಗಳಲ್ಲಿ ವಿಭಿನ್ನ ಆದ್ಯತೆಗಳು ಕಂಡುಬರುತ್ತವೆ. ಅಂಬೇಡ್ಕರ್ ಶಿಕ್ಷಣವನ್ನು ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಮತ್ತು ಸಾಮಾಜಿಕ ಅಸಮಾನತೆಗಳನ್ನು ನಿವಾರಿಸಿ ಶೋಷಿತರು, ಹಿಂದುಳಿದವರು ಮತ್ತು ವಂಚಿತ ಸಮುದಾಯಗಳನ್ನು ಸಬಲೀಕರಿಸುವ ಸಾಮಾಜಿಕ ನ್ಯಾಯದ ಸಾಧನವಾಗಿ ಕಂಡರು. ಸಮಾನ ಶಿಕ್ಷಣಾವಕಾಶದ ಮೂಲಕ ರಾಜಕೀಯ ಪ್ರಜಾಪ್ರಭುತ್ವಕ್ಕೆ ಸಾಮಾಜಿಕ ಪ್ರಜಾಪ್ರಭುತ್ವದ ನೆಲೆ ಒದಗಿಸಬೇಕೆಂಬುದು ಅವರ ಪ್ರಮುಖ ಆಶಯವಾಗಿತ್ತು. ನೆಹರೂ ಅವರು ಶಿಕ್ಷಣವನ್ನು ಆಧುನಿಕ, ವೈಜ್ಞಾನಿಕ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಭಾರತದ ನಿರ್ಮಾಣಕ್ಕೆ ಅಗತ್ಯವಾದ ಸಾಧನವಾಗಿ ಪರಿಗಣಿಸಿದರು. ವೈಜ್ಞಾನಿಕ ಮನೋಭಾವ, ತಾಂತ್ರಿಕ ಶಿಕ್ಷಣ, ಉನ್ನತ ಶಿಕ್ಷಣ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿಯ ಮೂಲಕ ರಾಷ್ಟ್ರದ ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಸಾಧಿಸಬೇಕೆಂದು ಅವರು ಒತ್ತಿಹೇಳಿದರು. ಈ ಇಬ್ಬರು ನಾಯಕರ ಚಿಂತನೆಗಳ ಪರಿಣಾಮವಾಗಿ ಸಂವಿಧಾನದಲ್ಲಿ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಗುರಿ, ಶಿಕ್ಷಣದಲ್ಲಿ ಸಮಾನ ಅವಕಾಶ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಶೈಕ್ಷಣಿಕ ಹಿತಾಸಕ್ತಿಯ ರಕ್ಷಣೆಗೆ ಮಹತ್ವದ ಸ್ಥಾನ ದೊರೆಯಿತು.

**ಪ್ರಧಾನ ಪದಗಳು:** ಶಿಕ್ಷಣ, ಸಾಮಾಜಿಕ ನ್ಯಾಯ, ಸಮಾನ ಅವಕಾಶ, ಪ್ರಜಾಪ್ರಭುತ್ವ, ಸಾಮಾಜಿಕ ಸಬಲೀಕರಣ, ವೈಜ್ಞಾನಿಕ ಮನೋಭಾವ, ಜಾತಿ ನಿರ್ಮೂಲನೆ, ರಾಷ್ಟ್ರ ನಿರ್ಮಾಣ, ತಾಂತ್ರಿಕ ಶಿಕ್ಷಣ, ಶೈಕ್ಷಣಿಕ ಹಕ್ಕು

---

[1].ಸಹಪ್ರಾಧ್ಯಾಪಕರು,ಇತಿಹಾಸ ವಿಭಾಗ, ಶ್ರೀಡಿ,ದೇವರಾಜಅರಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು.

**ಪೀಠಿಕೆ:** ಭಾರತದ ಸಂವಿಧಾನ ರಚನೆಯ ಸಂದರ್ಭದಲ್ಲಿ ಶಿಕ್ಷಣವು ಕೇವಲ ಜ್ಞಾನಾರ್ಜನೆಯ ಸಾಧನವಾಗಿರದೆ, ಸಾಮಾಜಿಕ ಪರಿವರ್ತನೆ, ಸಮಾನತೆ, ಪ್ರಜಾಪ್ರಭುತ್ವದ ಬಲವರ್ಧನೆ ಮತ್ತು ರಾಷ್ಟ್ರ ನಿರ್ಮಾಣದ ಪ್ರಮುಖ ಆಧಾರವೆಂದು ಪರಿಗಣಿಸಲ್ಪಟ್ಟಿತು. ವಸಾಹತುಶಾಹಿ ಆಡಳಿತದಿಂದ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಭಾರತವು ಅನಕ್ಷರತೆ, ಜಾತಿ ಅಸಮಾನತೆ, ಸಾಮಾಜಿಕ ಹಿಂದುಳಿತತೆ, ಬಡತನ ಮತ್ತು ಶೈಕ್ಷಣಿಕ ಅವಕಾಶಗಳ ಅಸಮಾನತೆಯಂತಹ ಹಲವು ಸವಾಲುಗಳನ್ನು ಎದುರಿಸುತ್ತಿತ್ತು. ಈ ಹಿನ್ನೆಲೆಯಲ್ಲಿ ಸಂವಿಧಾನ ರಚನಾ ಸಭೆಯಲ್ಲಿ ಶಿಕ್ಷಣದ ಸ್ವರೂಪ, ಎಲ್ಲರಿಗೂ ಶಿಕ್ಷಣದ ಅವಕಾಶ, ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ, ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಶೈಕ್ಷಣಿಕ ಪ್ರಗತಿ ಹಾಗೂ ಶಿಕ್ಷಣದಲ್ಲಿ ರಾಜ್ಯದ ಜವಾಬ್ದಾರಿಗಳ ಕುರಿತು ಮಹತ್ವದ ಚರ್ಚೆಗಳು ನಡೆದವು.

ಅಂಬೇಡ್ಕರ್ ಅವರು ಶಿಕ್ಷಣವನ್ನು ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಸಾಧನವಾಗಿ ಪರಿಗಣಿಸಿದರು. ಶತಮಾನಗಳಿಂದ ಶಿಕ್ಷಣದಿಂದ ವಂಚಿತರಾಗಿದ್ದ ಅಸ್ಪೃಶ್ಯರು, ಹಿಂದುಳಿದ ವರ್ಗಗಳು ಮತ್ತು ದುರ್ಬಲ ಸಮುದಾಯಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವ ಮೂಲಕ ಸಾಮಾಜಿಕ ಅಸಮಾನತೆಯನ್ನು ನಿವಾರಿಸಬಹುದು ಎಂಬುದು ಅವರ ಚಿಂತನೆಯ ಪ್ರಮುಖ ಅಂಶವಾಗಿತ್ತು. ಶಿಕ್ಷಣವು ವ್ಯಕ್ತಿಯಲ್ಲಿ ಸ್ವಾಭಿಮಾನ, ಹಕ್ಕುಗಳ ಅರಿವು ಮತ್ತು ಸಾಮಾಜಿಕ ಸಬಲೀಕರಣವನ್ನು ಬೆಳೆಸುವ ಮೂಲಕ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸುತ್ತದೆ ಎಂದು ಅವರು ಪ್ರತಿಪಾದಿಸಿದರು. ಜವಾಹರಲಾಲ್ ನೆಹರೂ ಅವರು ಶಿಕ್ಷಣವನ್ನು ಆಧುನಿಕ ರಾಷ್ಟ್ರ ನಿರ್ಮಾಣ, ವೈಜ್ಞಾನಿಕ ಮನೋಭಾವ, ತಾಂತ್ರಿಕ ಪ್ರಗತಿ ಮತ್ತು ಆರ್ಥಿಕ ಅಭಿವೃದ್ಧಿಯ ಪ್ರಮುಖ ಸಾಧನವೆಂದು ನೋಡಿದರು. ಸ್ವತಂತ್ರ ಭಾರತವು ವೈಜ್ಞಾನಿಕ ಮತ್ತು ತಾರ್ಕಿಕ ಚಿಂತನೆಯುಳ್ಳ ನಾಗರಿಕರನ್ನು ರೂಪಿಸಬೇಕಾದರೆ ಶಿಕ್ಷಣ ವ್ಯವಸ್ಥೆಯನ್ನು ಆಧುನಿಕಗೊಳಿಸುವುದು ಅಗತ್ಯವೆಂದು ಅವರು ಪ್ರತಿಪಾದಿಸಿದರು. ವಿಜ್ಞಾನ, ತಂತ್ರಜ್ಞಾನ, ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಆದ್ಯತೆ ನೀಡುವ ಮೂಲಕ ದೇಶದ ಅಭಿವೃದ್ಧಿಗೆ ಮಾನವ ಸಂಪನ್ಮೂಲವನ್ನು ಸಿದ್ಧಪಡಿಸುವುದು ಅವರ ದೃಷ್ಟಿಕೋನದ ಪ್ರಮುಖ ಭಾಗವಾಗಿತ್ತು.

ಸಂವಿಧಾನ ರಚನಾ ಸಭೆಯ ಚರ್ಚೆಗಳ ಪರಿಣಾಮವಾಗಿ ಶಿಕ್ಷಣಕ್ಕೆ ಸಂಬಂಧಿಸಿದ ಹಲವು ಆಶಯಗಳು ಸಂವಿಧಾನದಲ್ಲಿ ಸ್ಥಾನ ಪಡೆದವು. ಮೂಲ ಸಂವಿಧಾನದ ಅನುಚ್ಛೇದ 45ರ ಮೂಲಕ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವ ಗುರಿಯನ್ನು ರಾಜ್ಯದ ನೀತಿ ನಿರ್ದೇಶಕ ತತ್ವವಾಗಿ ರೂಪಿಸಲಾಯಿತು. ಅನಂತರದ ಸಾಂವಿಧಾನಾತ್ಮಕ ಬೆಳವಣಿಗೆಗಳಲ್ಲಿ ಶಿಕ್ಷಣದ ಹಕ್ಕಿಗೆ ಮತ್ತಷ್ಟು ಬಲ ದೊರೆತು ಅನುಚ್ಛೇದ 21ಎ ಅಡಿಯಲ್ಲಿ 06 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣದ ಮೂಲಭೂತ ಹಕ್ಕು ಮಾನ್ಯವಾಯಿತು. ಸಂವಿಧಾನ ರಚನಾ ಸಭೆಯಲ್ಲಿ ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯ ಮತ್ತು ಸಮಾನ ಶಿಕ್ಷಣಾವಕಾಶದ ದೃಷ್ಟಿಕೋನ ಹಾಗೂ ನೆಹರೂ ಅವರ ವೈಜ್ಞಾನಿಕ, ಆಧುನಿಕ

ಮತ್ತು ರಾಷ್ಟ್ರನಿರ್ಮಾಣ ಕೇಂದ್ರಿತ ಶಿಕ್ಷಣದ ದೃಷ್ಟಿಕೋನಗಳು ಸ್ವತಂತ್ರ ಭಾರತದ ಶಿಕ್ಷಣದ ಸಾಂವಿಧಾನಿಕ ಚಿಂತನೆಗೆ ಮಹತ್ವದ ಅಡಿಪಾಯವನ್ನು ಒದಗಿಸಿವೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣ ಕುರಿತ ಚರ್ಚೆಗಳನ್ನು ಪರಿಶೀಲಿಸುವುದು ಭಾರತೀಯ ಸಂವಿಧಾನದ ಸಾಮಾಜಿಕ ಹಾಗೂ ಅಭಿವೃದ್ಧಿ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಮಹತ್ವದ್ದಾಗಿದೆ.

**ಅಂಬೇಡ್ಕರ್ ಅವರ ಶಿಕ್ಷಣದ ದೃಷ್ಟಿಕೋನ**

ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಶಿಕ್ಷಣಕ್ಕೆ ಅತ್ಯಂತ ಮಹತ್ವದ ಸ್ಥಾನವಿತ್ತು. ಶತಮಾನಗಳ ಕಾಲ ಜಾತಿ ವ್ಯವಸ್ಥೆಯಿಂದ ಶಿಕ್ಷಣದಿಂದ ದೂರವಿಡಲ್ಪಟ್ಟ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ಸಮುದಾಯಗಳಿಗೆ ಶಿಕ್ಷಣದ ಅವಕಾಶವನ್ನು ಒದಗಿಸುವುದು ಸಾಮಾಜಿಕ ಪರಿವರ್ತನೆಯ ಮೊದಲ ಹೆಜ್ಜೆ ಎಂದು ಅವರು ಪ್ರತಿಪಾದಿಸಿದರು. ಶಿಕ್ಷಣದ ಮೂಲಕ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿತತೆಯನ್ನು ನಿವಾರಿಸಿ, ಸಮಾನ ಅವಕಾಶಗಳನ್ನು ಕಲ್ಪಿಸುವುದು ರಾಜ್ಯದ ಪ್ರಮುಖ ಕರ್ತವ್ಯವಾಗಬೇಕು ಎಂಬುದು ಅವರ ದೃಷ್ಟಿಕೋನವಾಗಿತ್ತು. ಸಂವಿಧಾನ ರಚನಾ ಸಭೆಯ 23 ನವೆಂಬರ್ 1948ರ ಚರ್ಚೆಯಲ್ಲಿ ಕರಡು ಸಂವಿಧಾನದ ಅನುಚ್ಛೇದ 36ರ ಕುರಿತು ಮಾತನಾಡಿದ ಅಂಬೇಡ್ಕರ್ ಅವರು 14 ವರ್ಷ ವಯಸ್ಸಿನವರೆಗೆ ಮಕ್ಕಳನ್ನು ಶಿಕ್ಷಣ ಸಂಸ್ಥೆಯಲ್ಲಿ ತರಬೇತಿಯಲ್ಲಿ ಇರಿಸುವ ಉದ್ದೇಶವನ್ನು ಸ್ಪಷ್ಟಪಡಿಸಿದರು. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಉದ್ಯೋಗವನ್ನು ನಿಷೇಧಿಸುವ ಸಾಂವಿಧಾನಾತ್ಮಕ ವ್ಯವಸ್ಥೆಯೊಂದಿಗೆ ಶಿಕ್ಷಣದ ಈ ಗುರಿ ಸಂಬಂಧ ಹೊಂದಿದೆ ಎಂದು ಅವರು ವಿವರಿಸಿದರು.

ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶಿಕ್ಷಣವು ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ; ಅದು ಸ್ವಾಭಿಮಾನ, ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ಚಲನೆಯ ಸಾಧನವಾಗಿತ್ತು. ಆದ್ದರಿಂದ ಶಿಕ್ಷಣದ ಅವಕಾಶಗಳು ಸಮಾಜದ ಎಲ್ಲ ವರ್ಗಗಳಿಗೂ ತಲುಪುವಂತೆ ರಾಜ್ಯವು ಸಕ್ರಿಯ ಪಾತ್ರ ವಹಿಸಬೇಕು ಎಂದು ಅವರು ಪ್ರತಿಪಾದಿಸಿದರು. ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪ್ರಗತಿಗೆ ಸಾಂವಿಧಾನಾತ್ಮಕ ರಕ್ಷಣೆಯ ಅಗತ್ಯವನ್ನು ಅವರು ಒತ್ತಿಹೇಳಿದರು. ಇದೇ ಹಿನ್ನೆಲೆಯಲ್ಲಿ ಸಂವಿಧಾನದ ಮೂಲ ಅನುಚ್ಛೇದ 45ರಲ್ಲಿ ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳೊಳಗೆ 14 ವರ್ಷ ವಯಸ್ಸಿನವರೆಗೆ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ರಾಜ್ಯವು ಪ್ರಯತ್ನಿಸಬೇಕು ಎಂಬ ಗುರಿಯನ್ನು ನಿಗದಿಪಡಿಸಲಾಯಿತು.

**ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣ**

ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ 14 ವರ್ಷ ವಯಸ್ಸಿನವರೆಗೆ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸುವ ಪ್ರಶ್ನೆಗೆ ವಿಶೇಷ ಮಹತ್ವ ನೀಡಲಾಯಿತು. ಕರಡು ಸಂವಿಧಾನದ ಅನುಚ್ಛೇದ

36ರಲ್ಲಿ 14 ವರ್ಷ ಪೂರ್ಣಗೊಳ್ಳುವವರೆಗೆ ಎಲ್ಲ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಒದಗಿಸಲು ಸಂವಿಧಾನ ಜಾರಿಗೆ ಬಂದ ಹತ್ತು ವರ್ಷಗಳೊಳಗೆ ರಾಜ್ಯವು ಪ್ರಯತ್ನಿಸಬೇಕು ಎಂದು ಪ್ರಸ್ತಾಪಿಸಲಾಗಿತ್ತು. ಅನಂತರ ಇದೇ ನಿಯಮವು ಅಂತಿಮ ಸಂವಿಧಾನದಲ್ಲಿ ಅನುಚ್ಛೇದ 45ರ ರೂಪದಲ್ಲಿ ರಾಜ್ಯದ ನೀತಿ ನಿರ್ದೇಶಕ ತತ್ವಗಳ ಭಾಗವಾಯಿತು. 23 ನವೆಂಬರ್ 1948 ರಂದು ಕರಡು ಅನುಚ್ಛೇದ 36ರ ಚರ್ಚೆಯ ಸಂದರ್ಭದಲ್ಲಿ ಅಂಬೇಡ್ಕರ್ ಅವರು ಶಿಕ್ಷಣದ ಈ ವ್ಯವಸ್ಥೆಯನ್ನು ಮಕ್ಕಳ ರಕ್ಷಣೆಯೊಂದಿಗೆ ಸಂಬಂಧಿಸಿದರು. 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಉದ್ಯೋಗಕ್ಕೆ ಒಳಪಡಿಸದಿರುವ ಸಂವಿಧಾನಾತ್ಮಕ ಉದ್ದೇಶದ ಹಿನ್ನೆಲೆಯಲ್ಲಿ ಅಂತಹ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆ ಕಲ್ಪಿಸುವುದು ಅಗತ್ಯವೆಂದು ಅವರು ವಿವರಿಸಿದರು. ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಸೇರಿಸುವ ಬದಲು ನೀತಿ ನಿರ್ದೇಶಕ ತತ್ವವಾಗಿ ರೂಪಿಸುವುದು ಸಂವಿಧಾನ ರಚನಾ ಸಭೆಯ ಪ್ರಮುಖ ನಿರ್ಧಾರವಾಗಿತ್ತು. ಇದಕ್ಕೆ ಮುಖ್ಯವಾಗಿ ಆ ಕಾಲದ ಆರ್ಥಿಕ ಮತ್ತು ಆಡಳಿತಾತ್ಮಕ ಸಾಮರ್ಥ್ಯದ ಮಿತಿಗಳು ಕಾರಣವಾಗಿದ್ದವು. ಆದಾಗ್ಯೂ, ಶಿಕ್ಷಣವನ್ನು ಹತ್ತು ವರ್ಷಗಳ ಅವಧಿಯಲ್ಲಿ ಸಾರ್ವತ್ರಿಕಗೊಳಿಸುವ ಗುರಿಯನ್ನು ಸಂವಿಧಾನವು ಸ್ಪಷ್ಟವಾಗಿ ಘೋಷಿಸಿತು. ಈ ಚರ್ಚೆಯಲ್ಲಿ ಶಿಕ್ಷಣದ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಆಯಾಮವೂ ಪ್ರಮುಖವಾಗಿತ್ತು. ಬಡವರು ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ರಾಜ್ಯವು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕೆಂಬ ಆಶಯ ವ್ಯಕ್ತವಾಯಿತು. ಸಂವಿಧಾನದ ಅನುಚ್ಛೇದ 46 ಕೂಡ ಸಮಾಜದಲ್ಲಿನ ದುರ್ಬಲ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಹಾಗೂ ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯಿಂದ ಉತ್ತೇಜಿಸಲು ರಾಜ್ಯಕ್ಕೆ ನಿರ್ದೇಶನ ನೀಡಿತು. 31 ಆಗಸ್ಟ್ 1949ರ ಸಂವಿಧಾನ ರಚನಾ ಸಭೆಯ ಚರ್ಚೆಯಲ್ಲಿ ಶಿಕ್ಷಣಕ್ಕೆ ರಾಷ್ಟ್ರೀಯ ಆದ್ಯತೆ ನೀಡುವ ಅಗತ್ಯವನ್ನು ಮತ್ತೊಮ್ಮೆ ಒತ್ತಿಹೇಳಲಾಯಿತು. ಶಿಕ್ಷಣದ ಸಮಾನ ಗುಣಮಟ್ಟವನ್ನು ಸಾಧಿಸಲು ರಾಜ್ಯಗಳ ನಡುವೆ ಸಮನ್ವಯ ಮತ್ತು ಅಗತ್ಯವಾದ ಆರ್ಥಿಕ ನೆರವು ಬೇಕೆಂಬ ಅಭಿಪ್ರಾಯವೂ ವ್ಯಕ್ತವಾಯಿತು.

ಉಚಿತ ಮತ್ತು ಕಡ್ಡಾಯ ಶಿಕ್ಷಣದ ಪರಿಕಲ್ಪನೆಯು ಅಂಬೇಡ್ಕರ್ ಅವರ ಸಮಾನ ಅವಕಾಶ, ಸಾಮಾಜಿಕ ನ್ಯಾಯ ಮತ್ತು ದುರ್ಬಲ ವರ್ಗಗಳ ಸಬಲೀಕರಣದ ದೃಷ್ಟಿಕೋನದೊಂದಿಗೆ ನಿಕಟವಾಗಿ ಸಂಬಂಧಿಸಿದೆ. ಮೂಲ ಸಂವಿಧಾನದ ಅನುಚ್ಛೇದ 45ರಲ್ಲಿ ತಕ್ಷಣ ನ್ಯಾಯಾಲಯದಲ್ಲಿ ಜಾರಿಗೊಳಿಸಬಹುದಾದ ಮೂಲಭೂತ ಹಕ್ಕಾಗಿರದಿದ್ದರೂ, ಅದು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದತ್ತ ಭಾರತದ ರಾಜ್ಯಕ್ಕೆ ಸ್ಪಷ್ಟವಾದ ಸಾಂವಿಧಾನಿಕ ಬದ್ಧತೆಯನ್ನು ನೀಡಿತು. ಅನಂತರ 2002ರ 86ನೇ ಸಂವಿಧಾನ ತಿದ್ದುಪಡಿಯಲ್ಲಿ ರಾಜ್ಯವು ಕಾನೂನಿನ ಮೂಲಕ ತಾನು ನಿರ್ಧರಿಸಬಹುದಾದಂತಹ

ರೀತಿಯಲ್ಲಿ 06 ರಿಂದ 14 ವರ್ಷಗಳ ವಯಸ್ಸಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಅನುಚ್ಛೇಧ 21ಎ ಅಡಿಯಲ್ಲಿ ಒದಗಿಸತಕ್ಕದ್ದು ಎಂದು ಸೂಚಿಸಿರುತ್ತದೆ.

**ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ:** ಅಂಬೇಡ್ಕರ್ ಅವರ ಚಿಂತನೆಗಳಲ್ಲಿ ಶಿಕ್ಷಣವು ಜಾತಿ ಆಧಾರಿತ ಅಸಮಾನತೆ, ಸಾಮಾಜಿಕ ಶೋಷಣೆ ಮತ್ತು ಅವಕಾಶಗಳ ಅಸಮಾನತೆಯನ್ನು ನಿವಾರಿಸುವ ಪ್ರಮುಖ ಸಾಧನವಾಗಿತ್ತು. ಶತಮಾನಗಳಿಂದ ಜಾತಿ ವ್ಯವಸ್ಥೆಯ ಕಾರಣದಿಂದ ಶಿಕ್ಷಣದಿಂದ ವಂಚಿತರಾಗಿದ್ದ ಅಸ್ಪೃಶ್ಯರು ಮತ್ತು ಇತರ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವುದನ್ನು ಅವರು ಸಾಮಾಜಿಕ ನ್ಯಾಯದ ಅವಿಭಾಜ್ಯ ಅಂಗವೆಂದು ಪರಿಗಣಿಸಿದರು. ಶಿಕ್ಷಣ ಪಡೆದ ವ್ಯಕ್ತಿ ತನ್ನ ಹಕ್ಕುಗಳನ್ನು ಅರಿತುಕೊಳ್ಳುವುದರ ಜೊತೆಗೆ ಅನ್ಯಾಯ ಮತ್ತು ಶೋಷಣೆಯ ವಿರುದ್ಧ ಸಂಘಟಿತವಾಗಿ ಹೋರಾಡಲು ಸಾಧ್ಯವಾಗುತ್ತದೆ ಎಂಬುದು ಅಂಬೇಡ್ಕರ್ ಅವರ ಮೂಲಭೂತ ನಂಬಿಕೆಯಾಗಿತ್ತು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ರಾಜಕೀಯ ಪ್ರಜಾಪ್ರಭುತ್ವ ಮಾತ್ರ ಸಾಕಾಗುವುದಿಲ್ಲ; ಅದು ಸಾಮಾಜಿಕ ಪ್ರಜಾಪ್ರಭುತ್ವದ ನೆಲೆಯ ಮೇಲೆ ನಿಂತಿರಬೇಕು. ಸಂವಿಧಾನವು ಎಲ್ಲ ನಾಗರಿಕರಿಗೆ ಸಮಾನ ಹಕ್ಕುಗಳನ್ನು ನೀಡಿದರೂ, ಸಾಮಾಜಿಕ ಮತ್ತು ಶೈಕ್ಷಣಿಕ ಅಸಮಾನತೆಗಳು ಮುಂದುವರಿದರೆ ಸಾಂವಿಧಾನಾತ್ಮಕ ಸಮಾನತೆ ಪ್ರಾಯೋಗಿಕ ಸಮಾನತೆಯಾಗಿ ಪರಿವರ್ತನೆಯಾಗುವುದಿಲ್ಲ. ಆದ್ದರಿಂದ ಶಿಕ್ಷಣವು ಸಾಮಾಜಿಕ ಸಮಾನತೆಯನ್ನು ನಿರ್ಮಿಸುವ ಪ್ರಮುಖ ಸಾಧನವಾಗಬೇಕು ಎಂಬುದು ಅವರ ಚಿಂತನೆಯ ಕೇಂದ್ರಬಿಂದುವಾಗಿರುತ್ತದೆ.

ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಈ ಸಾಮಾಜಿಕ ನ್ಯಾಯದ ದೃಷ್ಟಿಕೋನವು ಶಿಕ್ಷಣದ ಸಮಾನ ಅವಕಾಶ ಮತ್ತು ದುರ್ಬಲ ವರ್ಗಗಳ ರಕ್ಷಣೆಯ ಪ್ರಶ್ನೆಯೊಂದಿಗೆ ನಿಕಟವಾಗಿ ಸಂಬಂಧಿಸಿತ್ತು. ಸಂವಿಧಾನದ ಅನುಚ್ಛೇದ 46ರಲ್ಲಿ ರಾಜ್ಯವು ದುರ್ಬಲ ವರ್ಗಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವಿಶೇಷ ಕಾಳಜಿಯಿಂದ ಉತ್ತೇಜಿಸಬೇಕು ಹಾಗೂ ಅವರನ್ನು ಸಾಮಾಜಿಕ ಅನ್ಯಾಯ ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ರಕ್ಷಿಸಬೇಕು ಎಂದು ನಿರ್ದೇಶಿಸಲಾಗಿದೆ. ಈ ನಿಬಂಧನೆಯು ಶಿಕ್ಷಣವನ್ನು ಸಾಮಾಜಿಕ ನ್ಯಾಯದೊಂದಿಗೆ ಸಂಪರ್ಕಿಸುವ ಸಾಂವಿಧಾನಿಕ ಆಶಯವನ್ನು ಸ್ಪಷ್ಟಪಡಿಸುತ್ತದೆ. ಅಂಬೇಡ್ಕರ್ ಅವರ ಪ್ರಕಾರ; ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವದಂತಹ ಮೌಲ್ಯಗಳು ಕೇವಲ ಸಂವಿಧಾನದ ಪದಗಳಾಗಿ ಉಳಿಯದೆ, ವ್ಯಕ್ತಿಗಳ ಸಾಮಾಜಿಕ ಜೀವನದಲ್ಲಿ ಅಳವಡಿಕೆಯಾಗಬೇಕು. ಶಿಕ್ಷಣವು ವ್ಯಕ್ತಿಯಲ್ಲಿ ವಿಮರ್ಶಾತ್ಮಕ ಚಿಂತನೆ, ಆತ್ಮಗೌರವ, ಹಕ್ಕುಗಳ ಅರಿವು ಮತ್ತು ಸಾಮಾಜಿಕ ಹೊಣೆಗಾರಿಕೆಯನ್ನು ಬೆಳೆಸುವ ಮೂಲಕ ಈ ಮೌಲ್ಯಗಳನ್ನು ಬಲಪಡಿಸುತ್ತದೆ. ಈ ಕಾರಣದಿಂದಲೇ ಶಿಕ್ಷಣವನ್ನು ಅವರು ದಮನಿತ ಸಮುದಾಯಗಳ ಸಾಮಾಜಿಕ ಮತ್ತು ರಾಜಕೀಯ ಸಬಲೀಕರಣದ ಸಾಧನವಾಗಿ ಪರಿಗಣಿಸಿದರು. ಅಂಬೇಡ್ಕರ್ ಅವರ ಶಿಕ್ಷಣದ

ಚಿಂತನೆಯು ಕೇವಲ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಸಾಕ್ಷರತೆಯನ್ನು ವಿಸ್ತರಿಸುವ ಉದ್ದೇಶಕ್ಕೆ ಸೀಮಿತವಾಗಿರಲಿಲ್ಲ. ಅದರ ಅಂತಿಮ ಗುರಿ ಶಿಕ್ಷಣದ ಮೂಲಕ ಸಾಮಾಜಿಕ ರಚನೆಯಲ್ಲಿ ಸಮಾನತೆ, ವ್ಯಕ್ತಿಯ ಘನತೆ, ಹಕ್ಕುಗಳ ರಕ್ಷಣೆ ಮತ್ತು ಪ್ರಜಾಪ್ರಭುತ್ವದ ಸಾಮಾಜಿಕ ನೆಲೆಯನ್ನು ನಿರ್ಮಿಸುವುದಾಗಿತ್ತು. ಈ ದೃಷ್ಟಿಯಿಂದ ಅವರ ಶಿಕ್ಷಣದ ಪರಿಕಲ್ಪನೆ ಭಾರತೀಯ ಸಂವಿಧಾನದ ಸಾಮಾಜಿಕ ನ್ಯಾಯದ ತತ್ವದೊಂದಿಗೆ ಆಳವಾಗಿ ಸಂಬಂಧಿಸಿರುತ್ತದೆ.

**ನೆಹರೂ ಅವರ ಶಿಕ್ಷಣದ ದೃಷ್ಟಿಕೋನ**

ಜವಾಹರಲಾಲ್ ನೆಹರೂ ಅವರ ಶಿಕ್ಷಣದ ಚಿಂತನೆ ಆಧುನಿಕೀಕರಣ, ವೈಜ್ಞಾನಿಕ ಮನೋಭಾವ, ತಾಂತ್ರಿಕ ಪ್ರಗತಿ ಮತ್ತು ರಾಷ್ಟ್ರ ನಿರ್ಮಾಣದ ವಿಶಾಲ ಪರಿಕಲ್ಪನೆಯೊಂದಿಗೆ ಸಂಬಂಧಿಸಿತ್ತು. ವಸಾಹತುಶಾಹಿಯಿಂದ ಸ್ವಾತಂತ್ರ್ಯ ಪಡೆದ ಭಾರತವು ಬಡತನ, ಅನಕ್ಷರತೆ ಮತ್ತು ಆರ್ಥಿಕ ಹಿಂದುಳಿತತೆಯನ್ನು ನಿವಾರಿಸಬೇಕಾದರೆ ಶಿಕ್ಷಣವನ್ನು ವೈಜ್ಞಾನಿಕ ಮತ್ತು ಆಧುನಿಕ ಅಭಿವೃದ್ಧಿಯೊಂದಿಗೆ ಜೋಡಿಸಬೇಕು ಎಂಬುದು ಅವರ ದೃಷ್ಟಿಕೋನವಾಗಿತ್ತು. 19 ಏಪ್ರಿಲ್ 1948ರ ತಮ್ಮ ವೈಜ್ಞಾನಿಕ ಮನೋಭಾವನೆಯ ಭಾಷಣದಲ್ಲಿ ನೆಹರೂ ಅವರು ವಿಜ್ಞಾನವನ್ನು ಜೀವನ ಮತ್ತು ಸಾಮಾಜಿಕ ಸಂಸ್ಥೆಗಳ ಅಭಿವೃದ್ಧಿಗೆ ಅಗತ್ಯವಾದ ವಿಧಾನವೆಂದು ಒತ್ತಿಹೇಳಿದ್ದರು. ನೆಹರೂ ಅವರ ದೃಷ್ಟಿಯಲ್ಲಿ ಶಿಕ್ಷಣವು ಕೇವಲ ಪದವಿ ಪಡೆಯುವ ಅಥವಾ ಸರ್ಕಾರಿ ಉದ್ಯೋಗ ಪಡೆಯುವ ಸಾಧನವಾಗಿರಬಾರದು. ವಿದ್ಯಾರ್ಥಿಗಳಲ್ಲಿ ಕುತೂಹಲ, ಸ್ವತಂತ್ರ ಚಿಂತನೆ, ಹೊಸ ವಿಚಾರಗಳನ್ನು ಅನ್ವೇಷಿಸುವ ಮನೋಭಾವ ಮತ್ತು ಜವಾಬ್ದಾರಿಯುತ ನಾಗರಿಕತ್ವವನ್ನು ಬೆಳೆಸಬೇಕು ಎಂದು ಅವರು ಅಭಿಪ್ರಾಯಪಟ್ಟರು. 11 ಸೆಪ್ಟೆಂಬರ್ 1949ರ ಶಿಕ್ಷಣದ ನೈಜಾ ಸ್ವರೂಪ ಎಂಬ ಶೀರ್ಷಿಕೆಯಡಿಯಲ್ಲಿನ ಭಾಷಣದಲ್ಲಿ ವಿಶ್ವವಿದ್ಯಾನಿಲಯದ ಶಿಕ್ಷಣವು ವ್ಯಕ್ತಿಯ ಭವಿಷ್ಯದ ಬೆಳವಣಿಗೆಗೆ ಅಡಿಪಾಯ ಹಾಕಬೇಕು ಮತ್ತು ವಿದ್ಯಾರ್ಥಿಗಳಲ್ಲಿ ಜ್ಞಾನಾನ್ವೇಷಣೆಯ ಮನೋಭಾವ ಬೆಳೆಸಬೇಕು ಎಂದು ಪ್ರತಿಪಾದಿಸಿದರು.

ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿಯೂ ಉನ್ನತ ಶಿಕ್ಷಣ, ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಗಳ ಅಭಿವೃದ್ಧಿಗೆ ಮಹತ್ವ ನೀಡಲಾಯಿತು. 30 ಆಗಸ್ಟ್ 1949ರ ಚರ್ಚೆಯಲ್ಲಿ ಅಂಬೇಡ್ಕರ್ ಅವರು ಕೇಂದ್ರ ಸರ್ಕಾರದಿಂದ ಹಣಕಾಸು ನೆರವು ಪಡೆಯುವ ಮತ್ತು ಸಂಸತ್ತಿನಿಂದ ರಾಷ್ಟ್ರೀಯ ಮಹತ್ವದ ಸಂಸ್ಥೆಗಳೆಂದು ಘೋಷಿಸಲ್ಪಡುವ ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದ ಪ್ರಸ್ತಾವನೆಯನ್ನು ಮಂಡಿಸಿದರು. ಇದರ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಗೆ ಸಮನ್ವಯ ಕಲ್ಪಿಸುವ ಅಗತ್ಯವನ್ನು ಸಾಂವಿಧಾನಾತ್ಮಕವಾಗಿ ಗುರುತಿಸಲಾಯಿತು. ನೆಹರೂ ಅವರ ಶಿಕ್ಷಣದ ಪರಿಕಲ್ಪನೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವು ರಾಷ್ಟ್ರದ ಆರ್ಥಿಕ ಪುನರ್‌ನಿರ್ಮಾಣದ ಪ್ರಮುಖ ಸಾಧನಗಳು. ವಿಶ್ವವಿದ್ಯಾನಿಲಯಗಳು ಕೇವಲ ಪದವಿ ನೀಡುವ

ಸಂಸ್ಥೆಗಳಾಗಿರದೆ, ಜ್ಞಾನ, ಸಂಶೋಧನೆ ಮತ್ತು ಹೊಸ ಆವಿಷ್ಕಾರಗಳ ಕೇಂದ್ರಗಳಾಗಬೇಕು ಎಂಬುದು ಅವರ ಆಶಯವಾಗಿತ್ತು. ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಉನ್ನತ ಶಿಕ್ಷಣ, ವೈಜ್ಞಾನಿಕ ಮತ್ತು ತಾಂತ್ರಿಕ ಸಂಸ್ಥೆಗಳು ಹಾಗೂ ಸಂಶೋಧನಾ ಸಂಸ್ಥೆಗಳ ಗುಣಮಟ್ಟ ಮತ್ತು ಸಮನ್ವಯದ ಕುರಿತು ನಡೆದ ಚರ್ಚೆಗಳು ಈ ವಿಶಾಲ ರಾಷ್ಟ್ರ ನಿರ್ಮಾಣದ ದೃಷ್ಟಿಕೋನಕ್ಕೆ ಹೊಂದಿಕೆಯಾಗುತ್ತವೆ. ಅದೇ ಸಂದರ್ಭದಲ್ಲಿ ನೆಹರೂ ಅವರು ಭಾರತೀಯ ಪರಂಪರೆ ಮತ್ತು ಆಧುನಿಕ ವೈಜ್ಞಾನಿಕ ಸಂಸ್ಕೃತಿಯ ನಡುವೆ ಸಮತೋಲನವನ್ನು ಬಯಸಿದರು. 13 ಸೆಪ್ಟೆಂಬರ್ 1949ರ ಸಂವಿಧಾನ ರಚನಾ ಸಭೆಯ ಭಾಷಣದಲ್ಲಿಯೂ ಅವರು ಭಾರತವು ತನ್ನ ಭೂತಕಾಲದ ಸಾಂಸ್ಕೃತಿಕ ಬೇರುಗಳನ್ನು ಉಳಿಸಿಕೊಂಡು, ವಿಜ್ಞಾನ ಮತ್ತು ಕೈಗಾರಿಕಾ ಅಭಿವೃದ್ಧಿಯಿಂದ ರೂಪುಗೊಳ್ಳುತ್ತಿದ್ದ ಆಧುನಿಕ ಯುಗಕ್ಕೆ ಹೊಂದಿಕೊಳ್ಳಬೇಕೆಂದು ಪ್ರತಿಪಾದಿಸಿದರು. ನೆಹರೂ ಅವರ ಶಿಕ್ಷಣದ ದೃಷ್ಟಿಕೋನವು ಶಿಕ್ಷಣದ ಮೂಲಕ ಆಧುನಿಕ ಭಾರತ ನಿರ್ಮಾಣ ಎಂಬ ಆಶಯದ ಸುತ್ತ ರೂಪುಗೊಂಡಿತ್ತು. ಅವರ ಪ್ರಕಾರ ಶಿಕ್ಷಣವು ವೈಜ್ಞಾನಿಕ ಮನೋಭಾವ ಬೆಳೆಸುವುದು, ತಾಂತ್ರಿಕ ಮಾನವ ಸಂಪನ್ಮೂಲವನ್ನು ಸೃಷ್ಟಿಸುವುದು, ಸಂಶೋಧನೆಯನ್ನು ಉತ್ತೇಜಿಸುವುದು, ತಾರ್ಕಿಕ ಚಿಂತನೆಯನ್ನು ಬೆಳೆಸುವುದು ಮತ್ತು ಪ್ರಜಾಪ್ರಭುತ್ವದ ಜವಾಬ್ದಾರಿಯುತ ನಾಗರಿಕರನ್ನು ರೂಪಿಸುವುದರ ಮೂಲಕ ರಾಷ್ಟ್ರದ ಸಮಗ್ರ ಅಭಿವೃದ್ಧಿಗೆ ಕೊಡುಗೆ ನೀಡಬೇಕು.

**ಶಿಕ್ಷಣ ಮತ್ತು ಪ್ರಜಾಪ್ರಭುತ್ವ**

ಸಂವಿಧಾನ ರಚನಾ ಸಭೆಯ ಚರ್ಚೆಗಳ ಸಂದರ್ಭದಲ್ಲಿ ಶಿಕ್ಷಣವನ್ನು ಪ್ರಜಾಪ್ರಭುತ್ವದ ಯಶಸ್ಸು, ಸಮಾನ ನಾಗರಿಕತ್ವ ಮತ್ತು ಪರಿಣಾಮಕಾರಿ ಜನಭಾಗವಹಿಸುವಿಕೆಯ ಪ್ರಮುಖ ಸಾಧನವೆಂದು ಪರಿಗಣಿಸಲಾಯಿತು. ಸ್ವಾತಂತ್ರ್ಯ ಅನಂತರ ಭಾರತವು ಸಾರ್ವತ್ರಿಕ ವಯಸ್ಕ ಮತದಾನದ ಆಧಾರದ ಮೇಲೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರೂಪಿಸುತ್ತಿದ್ದ ಸಂದರ್ಭದಲ್ಲಿ ನಾಗರಿಕರು ತಮ್ಮ ಹಕ್ಕುಗಳು, ಕರ್ತವ್ಯಗಳು ಮತ್ತು ಸಾಂವಿಧಾನಾತ್ಮಕ ಮೌಲ್ಯಗಳನ್ನು ಅರಿತುಕೊಳ್ಳುವುದು ಅತ್ಯಂತ ಅಗತ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ಅಕ್ಷರಜ್ಞಾನವಿಲ್ಲದ ಹಾಗೂ ಸಾಮಾಜಿಕವಾಗಿ ಹಿಂದುಳಿದ ಜನಸಮುದಾಯಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವುದು ಪ್ರಜಾಪ್ರಭುತ್ವವನ್ನು ಬಲಪಡಿಸುವ ಪೂರ್ವಶರ್ತವೆಂದು ಪರಿಗಣಿಸಬಹುದು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶಿಕ್ಷಣವು ಹಕ್ಕುಗಳ ಅರಿವು ಮತ್ತು ಸಾಮಾಜಿಕ ಸಬಲೀಕರಣದ ಪ್ರಮುಖ ಸಾಧನವಾಗಿತ್ತು. ಜಾತಿ ವ್ಯವಸ್ಥೆಯಿಂದ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳು ಶಿಕ್ಷಣವನ್ನು ಪಡೆಯುವುದರಿಂದ ತಮ್ಮ ಹಕ್ಕುಗಳನ್ನು ಅರಿತುಕೊಂಡು ಸಾಮಾಜಿಕ ಮತ್ತು ರಾಜಕೀಯ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ ಎಂದು ಅವರು ನಂಬಿದ್ದರು. ಶಿಕ್ಷಣದ ಕೊರತೆಯು ವ್ಯಕ್ತಿಯನ್ನು ಕೇವಲ ಜ್ಞಾನದಿಂದ ವಂಚಿಸುವುದಲ್ಲದೆ, ತನ್ನ

ಹಕ್ಕುಗಳನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯದಿಂದಲೂ ವಂಚಿಸುತ್ತದೆ ಎಂಬುದು ಅವರ ಚಿಂತನೆಯ ಆಂತರಿಕ ಅಂಶವಾಗಿತ್ತು.

ಅಂಬೇಡ್ಕರ್ ಅವರ ಪ್ರಜಾಪ್ರಭುತ್ವದ ಪರಿಕಲ್ಪನೆಯಲ್ಲಿ ರಾಜಕೀಯ ಸಮಾನತೆಯ ಜೊತೆಗೆ ಸಾಮಾಜಿಕ ಸಮಾನತೆ ಅತ್ಯಗತ್ಯವಾಗಿತ್ತು. ಎಲ್ಲರಿಗೂ ಮತದಾನದ ಹಕ್ಕು ನೀಡಿದ ಮಾತ್ರಕ್ಕೆ ಪ್ರಜಾಪ್ರಭುತ್ವ ಸಂಪೂರ್ಣವಾಗುವುದಿಲ್ಲ; ಸಾಮಾಜಿಕ ಅಸಮಾನತೆಗಳು ಮುಂದುವರಿದರೆ ರಾಜಕೀಯ ಸಮಾನತೆಯ ಪ್ರಯೋಜನಗಳು ಎಲ್ಲರಿಗೂ ಸಮಾನವಾಗಿ ದೊರೆಯುವುದಿಲ್ಲ. ಆದ್ದರಿಂದ ಶಿಕ್ಷಣವು ಸ್ವಾತಂತ್ರ್ಯತೆ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳನ್ನು ಜನಜೀವನದಲ್ಲಿ ಬೇರೂರಿಸುವ ಮೂಲಕ ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಭದ್ರವಾದ ನೆಲೆಯನ್ನು ಒದಗಿಸಬೇಕು ಎಂದು ಅವರ ಚಿಂತನೆ ಸೂಚಿಸುತ್ತದೆ. ಜವಾಹರಲಾಲ್ ನೆಹರೂ ಅವರ ದೃಷ್ಟಿಯಲ್ಲಿ ಶಿಕ್ಷಣವು ಪ್ರಜಾಪ್ರಭುತ್ವ, ವೈಜ್ಞಾನಿಕ ಮನೋಭಾವ ಮತ್ತು ಆಧುನಿಕ ರಾಷ್ಟ್ರ ನಿರ್ಮಾಣದ ಸಾಧನವಾಗಿತ್ತು. ಶಿಕ್ಷಣದ ಮೂಲಕ ವ್ಯಕ್ತಿಗಳಲ್ಲಿ ಸ್ವತಂತ್ರ ಚಿಂತನೆ, ತಾರ್ಕಿಕ ಮನೋಭಾವ, ಪ್ರಶ್ನಿಸುವ ಸಾಮರ್ಥ್ಯ ಮತ್ತು ವೈಜ್ಞಾನಿಕ ದೃಷ್ಟಿಕೋನ ಬೆಳೆಸಬೇಕೆಂದು ಅವರು ಬಯಸಿದರು. 1949ರಲ್ಲಿ ಶಿಕ್ಷಣದ ಕುರಿತು ಮಾತನಾಡಿದ ನೆಹರೂ ಅವರು ಶಿಕ್ಷಣವು ವ್ಯಕ್ತಿಯ ಬೌದ್ಧಿಕ ಬೆಳವಣಿಗೆ ಮತ್ತು ಜ್ಞಾನಾನ್ವೇಷಣೆಗೆ ಉತ್ತೇಜನ ನೀಡಬೇಕೆಂಬ ಆಶಯವನ್ನು ವ್ಯಕ್ತಪಡಿಸಿದ್ದರು.

ನೆಹರೂ ಅವರ ದೃಷ್ಟಿಯಲ್ಲಿ ವೈಜ್ಞಾನಿಕ ಮನೋಭಾವವು ಆಧುನಿಕ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣವಾಗಿಯೇ ಮೂಢನಂಬಿಕೆ, ಅಂಧಶ್ರದ್ಧೆ ಮತ್ತು ತಾರ್ಕಿಕತೆಯ ಕೊರತೆಯನ್ನು ನಿವಾರಿಸಿ, ವಿಜ್ಞಾನ ಮತ್ತು ವಿಚಾರಸ್ವಾತಂತ್ರ್ಯದ ಆಧಾರದ ಮೇಲೆ ಸಮಾಜವನ್ನು ರೂಪಿಸಲು ಶಿಕ್ಷಣ ನೆರವಾಗಬೇಕು. ಈ ಕಾರಣದಿಂದಲೇ ಅವರು ಉನ್ನತ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಗಳ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿದರು. ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣದ ಚಿಂತನೆಗಳು ವಿಭಿನ್ನ ಆದ್ಯತೆಗಳನ್ನು ಹೊಂದಿದ್ದರೂ ಪರಸ್ಪರ ಪೂರಕವಾಗಿದ್ದವು. ಅಂಬೇಡ್ಕರ್ ಅವರು ಶಿಕ್ಷಣವನ್ನು ಸಾಮಾಜಿಕ ಅಸಮಾನತೆಯನ್ನು ನಿವಾರಿಸಿ ವಂಚಿತ ಸಮುದಾಯಗಳಿಗೆ ಸಮಾನ ನಾಗರಿಕತ್ವ ಮತ್ತು ಹಕ್ಕುಗಳನ್ನು ಒದಗಿಸುವ ಸಾಧನವಾಗಿ ನೋಡಿದರೆ, ನೆಹರೂ ಅದನ್ನು ವೈಜ್ಞಾನಿಕ ಮನೋಭಾವ ಬೆಳೆಸಿ ಆಧುನಿಕ, ಪ್ರಗತಿಪರ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರವನ್ನು ನಿರ್ಮಿಸುವ ಸಾಧನವಾಗಿ ಪರಿಗಣಿಸಿದರು. ಆದ್ದರಿಂದ ಭಾರತೀಯ ಪ್ರಜಾಪ್ರಭುತ್ವದ ದೃಢತೆಗೆ ಸಾಮಾಜಿಕ ನ್ಯಾಯಾಧಾರಿತ ಶಿಕ್ಷಣ ಮತ್ತು ವೈಜ್ಞಾನಿಕ–ಆಧುನಿಕ ಶಿಕ್ಷಣ ಎರಡೂ ಅಗತ್ಯವೆಂಬ ಸಮಗ್ರ ದೃಷ್ಟಿಕೋನ ಇವರ ಚಿಂತನೆಗಳಿಂದ ರೂಪುಗೊಳ್ಳುತ್ತದೆ.

**ಮಹಿಳಾ ಶಿಕ್ಷಣ**

ಭಾರತೀಯ ಸಮಾಜದಲ್ಲಿ ಮಹಿಳೆಯರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿತತೆಯನ್ನು ನಿವಾರಿಸುವಲ್ಲಿ ಶಿಕ್ಷಣವು ಅತ್ಯಂತ ಪ್ರಮುಖ ಸಾಧನವೆಂದು ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರೂ ಇಬ್ಬರೂ ಪರಿಗಣಿಸಿದರು. ಸಂವಿಧಾನ ರಚನೆಯ ಸಂದರ್ಭದಲ್ಲಿ ಮಹಿಳೆಯರಿಗೆ ಸಮಾನ ನಾಗರಿಕತ್ವ, ಸಮಾನ ಅವಕಾಶ ಮತ್ತು ಶಿಕ್ಷಣದ ಹಕ್ಕು ದೊರೆಯುವಂತೆ ಮಾಡುವ ಪ್ರಶ್ನೆ ಸಾಮಾಜಿಕ ನ್ಯಾಯದ ವಿಶಾಲ ಪರಿಕಲ್ಪನೆಯೊಂದಿಗೆ ಸಂಬಂಧಿಸಿತ್ತು. ಮಹಿಳೆಯರ ಶಿಕ್ಷಣದ ಪ್ರಗತಿಯಿಲ್ಲದೆ ಸಮಾನತಾಧಾರಿತ ಪ್ರಜಾಪ್ರಭುತ್ವವನ್ನು ನಿರ್ಮಿಸಲು ಸಾಧ್ಯವಿಲ್ಲ ಎಂಬುದು ಈ ಚಿಂತನೆಯ ಪ್ರಮುಖ ಅಂಶವಾಗಿತ್ತು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಮಹಿಳಾ ಶಿಕ್ಷಣವು ಮಹಿಳಾ ಮುಕ್ತಿಯ ಮತ್ತು ಸಾಮಾಜಿಕ ಪರಿವರ್ತನೆಯ ಪ್ರಮುಖ ಸಾಧನವಾಗಿತ್ತು. ಜಾತಿ ವ್ಯವಸ್ಥೆ ಮತ್ತು ಪಿತೃಪ್ರಧಾನ ಸಾಮಾಜಿಕ ರಚನೆಗಳಿಂದ ಮಹಿಳೆಯರು ಅನುಭವಿಸುತ್ತಿದ್ದ ಅಸಮಾನತೆಯನ್ನು ನಿವಾರಿಸಲು ಶಿಕ್ಷಣ ಅಗತ್ಯವೆಂದು ಅವರು ಪರಿಗಣಿಸಿದರು. ಮಹಿಳೆಯರು ಶಿಕ್ಷಣ ಪಡೆಯುವುದರಿಂದ ತಮ್ಮ ಹಕ್ಕುಗಳ ಬಗ್ಗೆ ಅರಿವು ಬೆಳೆಸಿಕೊಂಡು, ಕುಟುಂಬ ಮತ್ತು ಸಮಾಜದಲ್ಲಿ ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಮಹಿಳೆಯರಿಗೆ ಶಿಕ್ಷಣದ ಸಮಾನ ಅವಕಾಶ ಕಲ್ಪಿಸುವುದು ಸಾಮಾಜಿಕ ನ್ಯಾಯದ ಅವಿಭಾಜ್ಯ ಅಂಗವೆಂದು ಅವರ ಚಿಂತನೆಯಿಂದ ಸ್ಪಷ್ಟವಾಗುತ್ತದೆ. ಅಂಬೇಡ್ಕರ್ ಅವರ ಸಾಮಾಜಿಕ ಚಿಂತನೆಗಳಲ್ಲಿ ಮಹಿಳೆಯರ ಶಿಕ್ಷಣವು ಕೇವಲ ವೈಯಕ್ತಿಕ ಅಭಿವೃದ್ಧಿಯ ವಿಷಯವಾಗಿರಲಿಲ್ಲ. ಮಹಿಳೆಯರ ಪ್ರಗತಿಯು ಕುಟುಂಬದ, ಸಮುದಾಯದ ಮತ್ತು ಒಟ್ಟಾರೆ ಸಮಾಜದ ಪ್ರಗತಿಯೊಂದಿಗೆ ನೇರವಾಗಿ ಸಂಬಂಧಿಸಿದೆ ಎಂಬುದನ್ನು ಅವರು ಒತ್ತಿಹೇಳಿದರು.

ಶಿಕ್ಷಣ ಪಡೆದ ಮಹಿಳೆಯರು ತಮ್ಮ ಮಕ್ಕಳ ಶಿಕ್ಷಣ, ಆರೋಗ್ಯ, ಸಾಮಾಜಿಕ ಅರಿವು ಮತ್ತು ಕುಟುಂಬದ ನಿರ್ಧಾರಗಳಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಸಂವಿಧಾನದ ಮೂಲಕ ಮಹಿಳೆಯರ ಸಮಾನತೆಯನ್ನು ಖಚಿತಪಡಿಸುವಲ್ಲಿ ಅನುಚ್ಛೇದ–14ರಲ್ಲಿ ಕಾನೂನಿನ ಮುಂದೆ ಸಮಾನತೆಯನ್ನು ಖಚಿತಪಡಿಸಿದರೆ, ಅನುಚ್ಛೇದ–15ರಲ್ಲಿ ಲಿಂಗದ ಆಧಾರದ ಮೇಲೆ ತಾರತಮ್ಯವನ್ನು ನಿಷೇಧಿಸುತ್ತದೆ ಮತ್ತು ಅನುಚ್ಛೇದ–15(3)ರಲ್ಲಿ ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ವ್ಯವಸ್ಥೆಗಳನ್ನು ಮಾಡಲು ರಾಜ್ಯಕ್ಕೆ ಅವಕಾಶ ನೀಡುತ್ತದೆ. ಅನುಚ್ಛೇದ–16ರಲ್ಲಿ ಸಾರ್ವಜನಿಕ ಉದ್ಯೋಗದಲ್ಲಿ ಸಮಾನ ಅವಕಾಶವನ್ನು ಒದಗಿಸುತ್ತದೆ. ಈ ನಿಬಂಧನೆಗಳು ಮಹಿಳೆಯರ ಶಿಕ್ಷಣ ಮತ್ತು ಸಬಲೀಕರಣಕ್ಕೆ ಅಗತ್ಯವಾದ ಸಮಾನ ನಾಗರಿಕತ್ವದ ಸಾಂವಿಧಾನಿಕ ನೆಲೆಯನ್ನು ರೂಪಿಸಿವೆ.

ಜವಾಹರಲಾಲ್ ನೆಹರೂ ಅವರ ದೃಷ್ಟಿಯಲ್ಲಿ ಮಹಿಳಾ ಶಿಕ್ಷಣವು ಆಧುನಿಕ ಮತ್ತು ಪ್ರಗತಿಪರ ರಾಷ್ಟ್ರ ನಿರ್ಮಾಣದ ಅವಿಭಾಜ್ಯ ಅಂಗವಾಗಿತ್ತು. ಮಹಿಳೆಯರನ್ನು ಶಿಕ್ಷಣದಿಂದ ದೂರವಿಟ್ಟ ಸಮಾಜವು

ತನ್ನ ಮಾನವ ಸಂಪನ್ಮೂಲದ ದೊಡ್ಡ ಭಾಗವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ ಎಂಬ ಆಧುನಿಕ ಅಭಿವೃದ್ಧಿ ದೃಷ್ಟಿಕೋನ ಅವರ ಚಿಂತನೆಯಲ್ಲಿತ್ತು. ಮಹಿಳೆಯರಿಗೆ ಶಿಕ್ಷಣದ ಅವಕಾಶ ದೊರೆತಾಗ ಅವರಲ್ಲಿ ವೈಜ್ಞಾನಿಕ ಮನೋಭಾವ, ಸಾಮಾಜಿಕ ಅರಿವು ಮತ್ತು ಸ್ವಾವಲಂಬನೆಯ ಸಾಮರ್ಥ್ಯ ಬೆಳೆಯುತ್ತದೆ. ಇದರಿಂದ ಮಹಿಳೆಯರು ರಾಷ್ಟ್ರದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ನೆಹರೂ ಅವರ ಶಿಕ್ಷಣದ ಪರಿಕಲ್ಪನೆಯಲ್ಲಿ ಮಹಿಳೆಯರ ಪ್ರಗತಿಯು ಸಾಮಾಜಿಕ ಆಧುನಿಕೀಕರಣದ ಪ್ರಮುಖ ಸೂಚಕವಾಗಿತ್ತು. ಮಹಿಳೆಯರಿಗೆ ಸಮಾನ ಶಿಕ್ಷಣಾವಕಾಶ ನೀಡುವುದು ಲಿಂಗ ಅಸಮಾನತೆಯನ್ನು ಕಡಿಮೆ ಮಾಡುವುದರ ಜೊತೆಗೆ ಪ್ರಜಾಪ್ರಭುತ್ವದ ಸಮಾನ ನಾಗರಿಕತ್ವವನ್ನು ಬಲಪಡಿಸುತ್ತದೆ. ಮಹಿಳೆಯರು ಶಿಕ್ಷಣ, ಉದ್ಯೋಗ ಮತ್ತು ಸಾರ್ವಜನಿಕ ಜೀವನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಭಾಗವಹಿಸಿದಾಗ ಮಾತ್ರ ಆಧುನಿಕ ಪ್ರಜಾಪ್ರಭುತ್ವದ ಗುರಿಗಳು ಸಮಗ್ರವಾಗಿ ಸಾಧಿಸಲ್ಪಡುತ್ತವೆ ಎಂಬುದು ಅವರ ಚಿಂತನೆಯೊಂದಿಗೆ ಹೊಂದಿಕೊಳ್ಳುತ್ತದೆ.

ಅಂಬೇಡ್ಕರ್ ಅವರು ಮಹಿಳಾ ಶಿಕ್ಷಣವನ್ನು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ದೃಷ್ಟಿಯಿಂದ ಒತ್ತಿಹೇಳಿದರೆ, ನೆಹರೂ ಅದನ್ನು ಆಧುನಿಕೀಕರಣ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದ ಪರಿಗಣಿಸಿದರು. ಇಬ್ಬರ ಚಿಂತನೆಗಳಲ್ಲಿಯೂ ಮಹಿಳೆಯರನ್ನು ಶಿಕ್ಷಣದಿಂದ ವಂಚಿಸುವುದು ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ಪ್ರಗತಿಗೆ ಅಡ್ಡಿಯಾಗುತ್ತದೆ ಎಂಬ ಮೂಲಭೂತ ತತ್ವ ಅಡಕವಾಗಿದೆ. ಮಹಿಳಾ ಶಿಕ್ಷಣವು ಕೇವಲ ಮಹಿಳೆಯರ ವೈಯಕ್ತಿಕ ಹಕ್ಕಿನ ಪ್ರಶ್ನೆಯಲ್ಲ; ಅದು ಸಾಮಾಜಿಕ ನ್ಯಾಯ, ಲಿಂಗ ಸಮಾನತೆ, ಮಾನವ ಅಭಿವೃದ್ಧಿ ಮತ್ತು ಪ್ರಜಾಪ್ರಭುತ್ವದ ಗುಣಮಟ್ಟವನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿದೆ. ಅಂಬೇಡ್ಕರ್ ಮತ್ತು ನೆಹರೂ ಅವರ ಚಿಂತನೆಗಳು ಮಹಿಳೆಯರಿಗೆ ಸಮಾನ ಶಿಕ್ಷಣಾವಕಾಶ ಕಲ್ಪಿಸುವ ಸಮಾನತಾ ಮತ್ತು ಆಧುನಿಕ ಭಾರತದ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುತ್ತವೆ.

**ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣದ ದೃಷ್ಟಿಕೋನಗಳ ಹೋಲಿಕೆ**

ಅಂಬೇಡ್ಕರ್ ಮತ್ತು ಜವಾಹರಲಾಲ್ ನೆಹರೂ ಅವರ ಶಿಕ್ಷಣದ ದೃಷ್ಟಿಕೋನಗಳಲ್ಲಿ ಸಾಮ್ಯತೆಗಳಿದ್ದರೂ, ಅವರ ಆದ್ಯತೆಗಳಲ್ಲಿ ಗಮನಾರ್ಹ ವ್ಯತ್ಯಾಸಗಳಿದ್ದವು. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಶಿಕ್ಷಣದ ಮೂಲ ಉದ್ದೇಶ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಘನತೆಯನ್ನು ಸ್ಥಾಪಿಸುವುದು. ಜಾತಿ ವ್ಯವಸ್ಥೆ ಮತ್ತು ಸಾಮಾಜಿಕ ಅಸಮಾನತೆಯಿಂದ ವಂಚಿತರಾದ ದುರ್ಬಲ ವರ್ಗಗಳಿಗೆ ಶಿಕ್ಷಣದ ಅವಕಾಶ ಕಲ್ಪಿಸುವುದರ ಮೂಲಕ ಅವರನ್ನು ಸಬಲೀಕರಿಸಿ, ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿಕೊಡಬೇಕು ಎಂದು ಅವರು ಪ್ರತಿಪಾದಿಸಿದರು. ಶಿಕ್ಷಣವು ವ್ಯಕ್ತಿಗಳಿಗೆ ತಮ್ಮ ಹಕ್ಕುಗಳ ಅರಿವು ಮೂಡಿಸಿ, ಪ್ರಜಾಪ್ರಭುತ್ವದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವ ಸಾಮರ್ಥ್ಯವನ್ನು

ಬೆಳೆಸಬೇಕು ಹಾಗೂ ತಾರ್ಕಿಕ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಉತ್ತೇಜಿಸಬೇಕು ಎಂಬುದು ಅವರ ನಿಲುವಾಗಿತ್ತು. ರಾಜ್ಯವು ಸಮಾನ ಶಿಕ್ಷಣಾವಕಾಶಗಳನ್ನು ಖಚಿತಪಡಿಸುವುದರ ಜೊತೆಗೆ ಸಾಮಾಜಿಕವಾಗಿ ಹಿಂದುಳಿದ ವರ್ಗಗಳಿಗೆ ಅಗತ್ಯವಾದ ವಿಶೇಷ ರಕ್ಷಣೆಯನ್ನು ಒದಗಿಸಬೇಕು ಎಂದು ಅಂಬೇಡ್ಕರ್ ಅವರು ಒತ್ತಿಹೇಳಿದರು. ನೆಹರೂ ಅವರ ಶಿಕ್ಷಣದ ದೃಷ್ಟಿಕೋನವು ಆಧುನಿಕ ರಾಷ್ಟ್ರ ನಿರ್ಮಾಣ, ವೈಜ್ಞಾನಿಕ ಮನೋಭಾವ ಮತ್ತು ತಾಂತ್ರಿಕ ಪ್ರಗತಿಯೊಂದಿಗೆ ಹೆಚ್ಚು ನಿಕಟವಾಗಿ ಸಂಬಂಧಿಸಿತ್ತು. ಶಿಕ್ಷಣವು ಭಾರತೀಯ ಸಮಾಜವನ್ನು ಆಧುನಿಕಗೊಳಿಸುವುದರ ಜೊತೆಗೆ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಅಗತ್ಯವಾದ ಮಾನವ ಸಂಪನ್ಮೂಲವನ್ನು ರೂಪಿಸಬೇಕು ಎಂದು ಅವರು ಪರಿಗಣಿಸಿದರು. ಸಾಮಾನ್ಯ ಶಿಕ್ಷಣದ ವಿಸ್ತರಣೆಯ ಜೊತೆಗೆ ಉನ್ನತ, ವೈಜ್ಞಾನಿಕ ಮತ್ತು ತಾಂತ್ರಿಕ ಶಿಕ್ಷಣಕ್ಕೂ ಹೆಚ್ಚಿನ ಆದ್ಯತೆ ನೀಡಬೇಕೆಂದು ಅವರು ಪ್ರತಿಪಾದಿಸಿದರು. ಶಿಕ್ಷಣದ ಮೂಲಕ ತಾರ್ಕಿಕತೆ, ವೈಜ್ಞಾನಿಕ ದೃಷ್ಟಿಕೋನ ಮತ್ತು ಪ್ರಜಾಸತ್ತಾತ್ಮಕ ನಾಗರಿಕತೆಯನ್ನು ಬೆಳೆಸುವುದು ಅವರ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯ ಪ್ರಮುಖ ಭಾಗವಾಗಿತ್ತು.

**ಉಪಸಂಹಾರ:** ಸಂವಿಧಾನ ರಚನಾ ಸಭೆಯಲ್ಲಿನ ಚರ್ಚೆಗಳಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣದ ಚಿಂತನೆಗಳು ಪರಸ್ಪರ ಪೂರಕವಾದ ಎರಡು ಪ್ರಮುಖ ಆಯಾಮಗಳನ್ನು ಪ್ರತಿನಿಧಿಸುತ್ತವೆ. ಅಂಬೇಡ್ಕರ್ ಶಿಕ್ಷಣವನ್ನು ಸಾಮಾಜಿಕ ನ್ಯಾಯ, ಸಮಾನತೆ, ಮಾನವ ಘನತೆ ಮತ್ತು ದಮನಿತ ಸಮುದಾಯಗಳ ಸಬಲೀಕರಣದ ಸಾಧನವಾಗಿ ಪರಿಗಣಿಸಿದರೆ, ನೆಹರೂ ಶಿಕ್ಷಣವನ್ನು ವೈಜ್ಞಾನಿಕ ಮನೋಭಾವ, ಆಧುನಿಕೀಕರಣ, ತಾಂತ್ರಿಕ ಪ್ರಗತಿ ಮತ್ತು ರಾಷ್ಟ್ರನಿರ್ಮಾಣದ ಸಾಧನವಾಗಿ ನೋಡಿದರು. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ದೃಷ್ಟಿಕೋನವು ಶಿಕ್ಷಣದ ಸಮಾನ ಅವಕಾಶ ಮತ್ತು ದುರ್ಬಲ ಜನವರ್ಗಗಳ ಶೈಕ್ಷಣಿಕ ರಕ್ಷಣೆಗೆ ಒತ್ತು ನೀಡಿದರೆ, ನೆಹರೂ ಅವರ ಆಧುನಿಕತಾವಾದಿ ದೃಷ್ಟಿಕೋನವು ವಿಜ್ಞಾನ, ತಂತ್ರಜ್ಞಾನ, ಉನ್ನತ ಶಿಕ್ಷಣ ಮತ್ತು ಸಂಶೋಧನೆಯ ಅಭಿವೃದ್ಧಿಗೆ ಪ್ರೇರಣೆ ನೀಡಿತು. ಈ ಎರಡು ದೃಷ್ಟಿಕೋನಗಳ ಸಂಯೋಜನೆಯು ಸ್ವತಂತ್ರ ಭಾರತದ ಶಿಕ್ಷಣದ ಸಾಂವಿಧಾನಿಕ ಚಿಂತನೆಗೆ ಮಹತ್ವದ ಬಲವನ್ನು ನೀಡಿದೆ. ಶಿಕ್ಷಣವು ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶವನ್ನು ಒದಗಿಸುವುದರ ಜೊತೆಗೆ ಸಾಮಾಜಿಕ ಅಸಮಾನತೆಗಳನ್ನು ಕಡಿಮೆ ಮಾಡಿ, ವೈಜ್ಞಾನಿಕ ಮನೋಭಾವ ಬೆಳೆಸಿ, ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಸಾಧನವಾಗಬೇಕು ಎಂಬ ಆಶಯವು ಸಂವಿಧಾನ ರಚನಾ ಸಭೆಯ ಶಿಕ್ಷಣ ಕುರಿತ ಚರ್ಚೆಗಳ ಪ್ರಮುಖ ಪರಂಪರೆಯಾಗಿದೆ. ಈ ಹಿನ್ನೆಲೆಯಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಶಿಕ್ಷಣ ಚಿಂತನೆಗಳು ಇಂದಿಗೂ ಭಾರತದ ಸಮಾನತಾ ಮೂಲಕ ಜ್ಞಾನಾಧಾರಿತ ಮತ್ತು ಪ್ರಜಾಸತ್ತಾತ್ಮಕ ಸಮಾಜ ನಿರ್ಮಾಣಕ್ಕೆ ಪ್ರಸ್ತುತವಾಗಿವೆ.

**ಪರಾಮರ್ಶನ ಗ್ರಂಥಗಳು**

1. ಭಾರತ ಸಂವಿಧಾನ, ಭಾರತ ಸರ್ಕಾರ, 2019
2. ಭಾರತದ ಸಂವಿಧಾನ ರಚನಾ ಸಭೆಯ ಚರ್ಚೆಗಳು, ಸಂಪುಟ–01 ರಿಂದ 10, 2018
3. ಡಾ.ಬಾಬಾಸಾಹೇಬ್ ಅಂಬೇಡ್ಕರ್ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ–01 ರಿಂದ 22
4. ರಾಜಶೇಖರ.ಎಚ್.ಎಂ, ಭಾರತ ಸಂವಿಧಾನ ಮತ್ತು ಸರ್ಕಾರ, 2023
5. Constituent Assembly Debates, Vol-VII, 24 November 1948
6. Constituent Assembly Debates, 19 April 1948
7. Constituent Assembly Debates, Vol-VII, 23 November 1948
8. Constituent Assembly Debates, Vol-VIII, 23 August 1949
9. Constituent Assembly Debates, Vol-IX, 30 August 1949
10. Constituent Assembly Debates, Vol-IX, 31 August 1949
11. Constituent Assembly Debates, Vol-IX, 13 September 1949
12. Constituent Assembly Debates, 11 September 1949
13. Constituent Assembly Debates, Vol-VII, 25 November 1949